3277 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) *ಬೆಂಗಳೂರು ನಗರದಲ್ಲಿ ಗಣಕೀಕರಣ ವ್ಯವಸ್ಥೆ ಹೊಂದಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳು ಯಾವುವು.*

2) *ಪ್ರಸ್ತುತ ಸಾಲಿನಲ್ಲಿ ಗಣಕೀಕರಣ ವ್ಯವಸ್ಥೆಯನ್ನು ಅಳವಡಿಸಲು ಉದ್ದೇಶಿತ ಕಛೇರಿಗಳು ಯಾವುವು?*

3) *ಈ ಗಣಕೀಕರಣ ಯಂತ್ರದಿಂದ ಪ್ರತಿನಿತ್ಯ ಸರಾಸರಿ ನೀಡುವ ಲೈಸೆನ್ಸ್ ಎಷ್ಟು ಮತ್ತು ನೇರವಾಗಿ (ಗಣಕೀಕರಣ ಯಂತ್ರದ ಮೂಲಕವಲ್ಲದೆ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಯಶವಂತಪುರದ ಕಛೇರಿಯಲ್ಲಿ ಎಷ್ಟು?*

4) *ಈ ಗಣಕೀಕರಣದ ಯಂತ್ರದ ಮೂಲಕ ಅಭ್ಯರ್ಥಿಗಳಿಗೆ ಕನ್ನಡದಲ್ಲಿಯೇ ಪ್ರಶ್ನೆ ಕೇಳಲಾಗುತ್ತಿದೆಯೇ?*

5) *ಇಲ್ಲದಿದ್ದಲ್ಲಿ, ಸರ್ಕಾರ ಈ ಯಂತ್ರದ ಮೂಲಕ ಪ್ರಶ್ನೆ ಕೇಳಲು ಕ್ರಮ ಕೈಗೊಂಡಿದೆಯೇ?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

1) ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಯಶವಂತಪುರ)). ಇಂದಿರಾನಗರ, ಕೋರಮಂಗಲ.

2) ಪ್ರಾದೇಶಿಕ ಸಾರಿಗೆ ಕಛೇರಿ, ಮೈಸೂರು ಬೆಂಗಳೂರು (ಜಯನಗರ), ಧಾರವಾಡ ಮತ್ತು ಮಂಗಳೂರು.

3) <u>ಗಣಕೀಕರಣ ಮೂಲಕ</u> <u>ನೇರವಾಗಿ</u>

-23- -46-

4) ಸದ್ಯಕ್ಕಿಲ್ಲ.

5) ಹೌದು, ಎರಡೂ ಭಾಷೆಗಳಲ್ಲಿ.

ಬೆಂಗಳೂರಿನಲ್ಲಿ 1991ನೇ ಜುಲೈ ಅಂತ್ಯದವರೆಗೆ ವಿದ್ಯುತ್‌ಚ್ಛಕ್ತಿ ಗೃಹ ಮತ್ತು ಗೃಹೇತರ ಬಳಕೆದಾರರ ಸಂಖ್ಯೆ.

3276 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕ ಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ) *ಬೆಂಗಳೂರಿನಲ್ಲಿ 1991ನೇ ಜುಲೈ ಅಂತ್ಯದವರೆಗಿರುವ ವಿದ್ಯುಚ್ಛಕ್ತಿ ಗೃಹ ಮತ್ತು ಗೃಹೇತರ ಬಳಕೆದಾರರ ಸಂಖ್ಯೆ ಎಷ್ಟು?*

ಆ) *ಬೆಂಗಳೂರು ನಗರದಲ್ಲಿ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಗಣಕ ಯಾಂತ್ರೀಕರಿಸುವ ಪ್ರಸ್ತಾವವೇನಾದರೂ ಇದೆಯೇ?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಜುಲೈ 1991ನೇ ಅಂತ್ಯದವರೆಗಿನ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

10 ಗೃಹ ಬಳಕೆದಾರರು...7,36,503

2) ಗೃಹೇತರ ಬಳಕೆದಾರರು... 2,03,663

ಆ) ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಗಣಕ ಯಾಂತ್ರೀಕರಣಗೊಳಿಸುವ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುದ್ದೀಪಗಳನ್ನು ಒದಗಿಸುವುದು.

3275 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಿಗೆ 1990-91ನೇ ಸಾಲಿನಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುದ್ದೀಪಗಳನ್ನು ಒದಗಿಸಲು ನಿಗದಿಪಡಿಸಿದ್ದ ಗುರಿ ಎಷ್ಟು?*

ಆ) *ಇದರಲ್ಲಿ 1990-91ನೇ ಸಾಲಿನಲ್ಲಿ ಕೊಳಚೆ ಪ್ರದೇಶಗಳಲ್ಲಿನ ಎಷ್ಟು ಮನೆಗಳಿಗೆ ವಿದ್ಯುದ್ದೀಪಗಳನ್ನು ಒದಗಿಸಲಾಗಿದೆ?*

ಇ) *ಇವುಗಳಲ್ಲಿ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿನ ಸಂಖ್ಯೆ ಎಷ್ಟು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಈ ಯೋಜನೆಯು ಗ್ರಾಮಾಂತರ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆ.

ಆ) ಮೇಲೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ನ್ಯಾಷನಲ್ ಸಹಕಾರ ಬ್ಯಾಂಕ್ ನಿಯಮಿತ ಬೆಂಗಳೂರು ಇದರಲ್ಲಿ ಕೆಲಸ ಮಾಡುವ ಜಾತಿವಾರು ವರ್ಗ.

3412 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಎ) *ನ್ಯಾಷನಲ್ ಸಹಕಾರ ಬ್ಯಾಂಕ್ ನಿಯಮಿತ ಬೆಂಗಳೂರು ಇದರಲ್ಲಿ ಕೆಲಸ ಮಾಡುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು?*

ಬಿ) *ಅದರಲ್ಲಿ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರು (ವರ್ಗವಾರು ವಿವರಣೆಗಳನ್ನು ಕೊಡುವುದು):*

ಸಿ) *ಬ್ಯಾಂಕು ಸರ್ಕಾರದ ಆದೇಶದನ್ವಯ ನೇಮಕಾತಿ ಹಾಗೂ ಮುಂಬಡ್ತಿ ನೀಡಿಕೆಯಲ್ಲಿ ರೋಸ್ಟರ್ ಪದ್ಧತಿಯನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?*

ಡಿ) *ಹಾಗಿದ್ದಲ್ಲಿ, ಸದರೀ ಬ್ಯಾಂಕಿನ ಕಾರ್ಯಕಾರಿ ಮಂಡಳಿಯ ಮೇಲೆ ಸರ್ಕಾರ ತೆಗೆದುಕೊಳ್ಳಬೇಕಾಗಿರುವ ಕ್ರಮ.*

ಶ್ರೀ ಎಸ್.ಆರ್. ಮೋರೆ.(ಸಹಕಾರ ರಾಜ್ಯ ಸಚಿವರು)

ಎ) 122.

ಬಿ) ಎಸ್.ಸಿ.- 01 : ಕಿರಿಯ ಸಹಾಯಕ. ಹಿಂದುಳಿದ ವರ್ಗ-02 (1ಡ್ರೈವರ್ 1 ಅಟೆಂಡರ್)

ಸಿ) ಹೌದು.

ಡಿ) ಪರಿಶೀಲಿಸಲಾಗುವುದು.

ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಹೊಸಬಸ್ ನಿಲ್ದಾಣದ ನಿರ್ಮಾಣ.